# ಆರ್. ಕೆ. ನಲ್ಲೂರು ಪ್ರಸಾದ್ ಅವರ ಕಾವ್ಯಗಳಲ್ಲಿ ಕೌಟುಂಬಿಕ ನೆಲೆಗಳು

**ಉಮೇಶ್ ಬಿ. ಆರ್.[1] & ಸುಮಾ ಆರ್.[2]**

[1]ಸಂಶೋಧಕರು ಮತ್ತು ಕನ್ನಡ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ರಾಮನಗರ.

[2]ಮಾರ್ಗದರ್ಶಕರು ಮತ್ತು ಕನ್ನಡ ಪ್ರಾಧ್ಯಾಪಕರು, ಎಸ್.ಜೆ.ಬಿ.ಸಿ.ಎಂ.ಎಸ್. ಕನ್ನಡ ಸಂಶೋಧನಾ ಕೇಂದ್ರ, ಬಿ.ಜಿ.ಎಸ್. ಆರೋಗ್ಯ ಮತ್ತು ಶಿಕ್ಷಣ ನಗರ, ಕೆಂಗೇರಿ.

**Received:** 05-07-2024 ; **Acepted:** 05-09-2024 ; **Published:** 02-10-2024

**DOI: https://doi.org/10.5281/zenodo.13870956**

**ABSTRACT:**

ಕನ್ನಡ ಸಾಹಿತ್ಯಕ್ಕೆ 1500 ವರ್ಷಗಳ ಇತಿಹಾಸವಿದೆ ಎಂಬುದು ಚರಿತ್ರೆಕಾರರ ಅಭಿಪ್ರಾಯ. ಅಭಿಪ್ರಾಯಕ್ಕೆ ಕನ್ನಡಿ ಹಿಡಿದ ಹಾಗೆ ಕನ್ನಡ ಸಾಹಿತ್ಯ ನಿಂತ ನೀರಾಗದೆ ಚಲನಶೀಲತೆಯನ್ನು ಪಡೆದು ಸಾಗುತ್ತಾ ಬಂದಿದೆ. ಪಂಪ, ರನ್ನ, ಕುಮಾರವ್ಯಾಸ, ಮುದ್ದಣ ಹೀಗೆ ಬಹುದೊಡ್ಡ ಪರಂಪರೆಯಿದೆ. ಚಂಪುವಿನಿಂದ ಪ್ರಾರಂಭವಾಗಿ ಅನೇಕ ಪ್ರಕಾರಗಳಲ್ಲಿ ಬೆಳೆದು ಬಂದಿರುವುದನ್ನು ಗಮನಿಸಬಹುದು. ಆತ್ಮಕಥೆ ವ್ಯಕ್ತಿಯ ಬದುಕಿನ ಪ್ರಮುಖ ಚಿತ್ರಣಗಳನ್ನು ಪ್ರತಿಬಿಂಬಿಸುತ್ತದೆ. ಹಾಗೆಯೇ ವ್ಯಕ್ತಿ ಚಿತ್ರಣಗಳು ಸಾಹಿತ್ಯ, ಕ್ರೀಡೆ ಅಥವಾ ಇನ್ನಿತರ ಯಾವುದೇ ಕ್ಷೇತ್ರದಲ್ಲಿ ಬಹುಮುಖ ಸಾಧನೆ ಮಾಡಿ ಸಮಾಜದ ಬಗ್ಗೆ ತನ್ನದೇ ಆದ ಕಾಳಜಿ ಹೊಂದಿರುವ ಅನೇಕರು ನಮ್ಮ ನಡುವೆ ಇದ್ದಾರೆ. ಕೆಲವರದು ವೃತ್ತಿ ಒಂದಾದರೆ ಪ್ರವೃತ್ತಿ ಇನ್ನೊಂದಾಗಿರುತ್ತದೆ. ಅಂತೆಯೇ ಆರ್. ಕೆ. ನಲ್ಲೂರು ಪ್ರಸಾದರು ಅಧ್ಯಾಪಕ ವೃತ್ತಿಯ ಜೊತೆಗೆ ಸಾಹಿತ್ಯ ರಚನೆ ಮಾಡಿ ಸಮಾಜವನ್ನು ತಿದ್ದುವ ಕೆಲಸ ಮಾಡಿದವರು. ಅಷ್ಟಕ್ಕೇ ಅವರ ಕಾರ್ಯ ನಿಲ್ಲದೆ ಕರ್ನಾಟಕ ರಾಜ್ಯದ ಅತ್ಯುತ್ತಮ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಅಸಾಧಾರಣ ಸೇವೆ ಸಲ್ಲಿಸಿದವರು. ಅವರ ಕಾವ್ಯಗಳಲ್ಲಿ ಹಳ್ಳಿಯ ಸೊಗಡಿದೆ, ತಂದೆ-ತಾಯಿಯ ಕರುಳು ಬಳ್ಳಿಯ ಸಂಬಂಧವಿದೆ, ನೋವಿಗೆ ಮಿಡಿಯುವ ಸಹನೆ ಇದೆ, ಬಡ ಜನರ ಬದುಕಿನ ಅನಾವರಣವಿದೆ. ಇವರ ಕಾವ್ಯಗಳಲ್ಲಿನ ಕೌಟುಂಬಿಕ ನೆಲೆಯನ್ನು ತಿಳಿಸಿಕೊಡುವುದೇ ಈ ಲೇಖನದ ಮುಖ್ಯ ಉದ್ದೇಶ. ಚುರುಕಾದ ವ್ಯಕ್ತಿತ್ವದಿಂದ ಸೂಜಿಗಲ್ಲಿನಂತೆ ಸೆಳೆಯುವ ನಲ್ಲೂರರು ನಮ್ಮ ನಡುವೆ ಎಲೆ ಮರೆ ಕಾಯಿಯಂತೆ ಇರುವವರು. ಈ ನಿಟ್ಟಿನಲ್ಲಿ ಅವರ ಕಾವ್ಯದ ಬಗ್ಗೆ ಈ ಲೇಖನದಲ್ಲಿ ಚರ್ಚಿಸಲಾಗಿದೆ.

**KEYWORDS:**

ಕೌಟುಂಬಿಕ ನೆಲೆ, ಕೃತಜ್ಞತಾ ಭಾವ, ಅವಿನಾಭಾವ ಸಂಬಂಧ, ಸ್ವಾತಂತ್ರ್ಯ ಚಳವಳಿ, ಗಾಂಧಿಯವರ ಪ್ರಭಾವ.

ಲೇಖಕನಿಗೆ ತಾನು ಬದುಕುತ್ತಿರುವ ಸಮಾಜದ ಬಗ್ಗೆ ಸದಾಕಾಲ ಕೃತಜ್ಞತಾ ಭಾವವೇ ಇರುತ್ತದೆ. ಸಮಾಜದ ಪ್ರತಿಯೊಂದು ಆಗು-ಹೋಗುಗಳನ್ನು ಆತ ಸದಾ ತೆರೆದ ಹೃದಯದಿಂದ ಸ್ವೀಕರಿಸಿ, ಅನುಭವಿಸಿ ಅವುಗಳಿಗೆ ಅಭಿವ್ಯಕ್ತಿಸುತ್ತಾ ಬದುಕುತ್ತಾನೆ. ಅವನ ಅಭಿವ್ಯಕ್ತಿಯು ಮೌಖಿಕವಾಗಿ ಇಲ್ಲವೇ ಕಾರ್ಯರೂಪದಲ್ಲಿ ಅಭಿವ್ಯಕ್ತಿಸುವುದನ್ನು ನಾವು ಕಾಣಬಹುದು. ಸಾಹಿತಿಯು ತಾನು ಕಂಡುಂಡ ಅನೇಕ ಘಟನೆಗಳಿಗೆ ಪ್ರತಿಕ್ರಿಯಿಸುತ್ತಲೇ ಇರುತ್ತಾನಾದರೂ ಈತನ ಕಾವ್ಯ ರಚನೆಗೆ ಪ್ರೇರಣೆ, ಪ್ರಭಾವಗಳಿರುವುದನ್ನು ಅಲ್ಲಗಳೆಯಲಾಗದು.

ಆಧುನಿಕ ಕನ್ನಡ ಕವಿಗಳಲ್ಲಿ ಆರ್. ಕೆ. ನಲ್ಲೂರು ಪ್ರಸಾದ್‌ರವರು ಒಬ್ಬರು. ಯಾವುದೇ ಒಂದು ಸಾಹಿತ್ಯಿಕ ಪಂಥಕ್ಕೆ ಸೀಮಿತರಾಗದ ಇವರು ಸಮನ್ವಯತೆಯಿಂದ ಕಾವ್ಯ ಕಟ್ಟುತ್ತಿರುವವರು. ಇವರು ಕವಿಯಾಗಿ, ಜಾನಪದ ವಿದ್ವಾಂಸರಾಗಿ, ಕಲಾವಿದರಾಗಿ, ಕನ್ನಡ ಸಾಂಸ್ಕೃತಿಕ ಲೋಕದ ರಾಯಭಾರಿಯಾಗಿ, ವಿಚಾರವಾದಿ, ಸಂಸ್ಕೃತಿ ಚಿಂತಕರು, ಲೇಖಕರಾಗಿಯೂ ಗುರುತಿಸಲ್ಪಟ್ಟಿದ್ದಾರೆ. ಗ್ರಾಮೀಣ ಭಾಗದಿಂದ ಬಂದ ಶೂದ್ರ ಸಮುದಾಯದ ಒಳಹೊರಗುಗಳನ್ನು ಬಲ್ಲ ನಲ್ಲೂರರ ಕಾವ್ಯ ಬದುಕಿನ ಮೇಲೆ ಕುವೆಂಪುರವರ ಹಾಗೂ ದ.ರಾ.ಬೇಂದ್ರೆಯವರ ಪ್ರಭಾವ ಹೆಚ್ಚಾಗಿರುವುದನ್ನು ಕಾಣಬಹುದು. ಸಮಾಜದ ಉನ್ನತ ಸಮುದಾಯದಲ್ಲಿ ಹುಟ್ಟಿ ಬೆಳೆದ ಬೇಂದ್ರೆಯವರು ತಮ್ಮ ಪೂರ್ವಜರ ಸಂಸ್ಕೃತ ಭೂಯಿಷ್ಟ ಸಾಹಿತ್ಯಿಕ ಪರಂಪರೆಯನ್ನು ಕೈಬಿಟ್ಟು ಗ್ರಾಮೀಣರ ಭಾಷೆಯನ್ನು ತಮ್ಮ ಕಾವ್ಯಗಳ ಭಾಷೆಯನ್ನಾಗಿಸಿಕೊಂಡು ಕಾವ್ಯ ಕಟ್ಟಿ ಜನಮನಕ್ಕೆ ಹತ್ತಿರವಾದವರು. ನಲ್ಲೂರು ಪ್ರಸಾದರ 'ದಗ್ಧ, ಸೋನೆ ಮುಗಿಲು, ನೀನೆಂಬ ನಾನು, ರೆಕ್ಕೆ ಬಡಿಯುವ ಮುನ್ನ ಹಾಗೂ ನಿವೃತ್ತೋಪನಿಷತ್ತು' ಕವನ ಸಂಕಲನಗಳಲ್ಲಿರುವ ಕವನಗಳಲ್ಲಿ ಅಭಿವ್ಯಕ್ತಗೊಂಡಿರುವ ಕೌಟುಂಬಿಕ ನೆಲೆಗಳನ್ನು ಈ ಲೇಖನದಲ್ಲಿ ಗುರುತಿಸಲಾಗಿದೆ.

ನಮಗೆಲ್ಲ ತಿಳಿದಿರುವಂತೆ ಕುಟುಂಬವೆಂಬುದು ಸಾಮಾಜಿಕ ವ್ಯವಸ್ಥೆಯ ಚಿಕ್ಕ ಘಟಕವಾಗಿದೆ. ಇಂತಹ ಅನೇಕ ಘಟಕಗಳು ಸೇರಿ ಒಂದು ಸಮಾಜ ನಿರ್ಮಾಣವಾಗುತ್ತದೆ. ಗಂಡು ಹೆಣ್ಣು ವಿಧ್ಯುಕ್ತವಾಗಿ ಕೂಡಿ ಬದುಕುವ ಜೀವನ ಚಾಲ್ತಿಗೆ ಬಂದ ಮೇಲೆ ಕುಟುಂಬ ಜೀವನ ಅಸ್ತಿತ್ವಕ್ಕೆ ಬಂದಿರಬಹುದು. ಕುಟುಂಬಕ್ಕೆ ಯಜಮಾನ ಅಥವಾ ಯಜಮಾನಿ ಪ್ರಮುಖವಾಗಿರುತ್ತಾನೆ/ಳೆ. ಉಳಿದವರು ಆಯಾ ಕುಟುಂಬದ ಸದಸ್ಯರಾಗಿರುತ್ತಾರೆ. ಪುರುಷ ಪ್ರಧಾನ ಕುಟುಂಬ ವ್ಯವಸ್ಥೆ ಚಾಲ್ತಿಗೆ ಬರುವ ಪೂರ್ವದಲ್ಲಿ ಮಾತೃಪ್ರಧಾನ ವ್ಯವಸ್ಥೆ ಸಮಾಜದಲ್ಲಿತ್ತು ಎಂಬುದು ಸಂಶೋಧನೆಗಳಿಂದ ದೃಢಪಟ್ಟಿದೆ.

ನಲ್ಲೂರರ ಬದುಕಿನಲ್ಲಿ ಧನಾತ್ಮಕವಾಗಿ, ಋಣಾತ್ಮಕವಾಗಿ ತೀವ್ರ ಪ್ರಭಾವವನ್ನು

ಬೀರಿದವರೆಂದರೆ ಅವರ ತಂದೆಯವರು. ಜನಾನುರಾಗಿಯಾಗಿದ್ದ ನಲ್ಲೂರರ ತಂದೆಯವರು ತಮ್ಮ ಒಳ್ಳೆಯತನದ ಕಾರಣಕ್ಕೂ ಏನೋ ಸಮಾಜದಲ್ಲಿ ಕೆಲವೊಮ್ಮೆ ನಿಂದನೆಗೆ ಗುರಿಯಾಗಿದ್ದರಲ್ಲದೆ, ಸಂಕಷ್ಟಗಳನ್ನು ಎದುರಿಸಿದ್ದರು. ಅಂತಹ ಸನ್ನಿವೇಶಗಳನ್ನು ಹಾಗೂ ತಮ್ಮ ತಂದೆಯವರ ವ್ಯಕ್ತಿತ್ವವನ್ನು ತಮ್ಮ 'ನನ್ನಪ್ಪ' ಎಂಬ ಕವನದ ಮೂಲಕ ಕಟ್ಟಿಕೊಡುವ ನಲ್ಲೂರರು,

**"ಅಪ್ಪನಂತಲ್ಲ ಮಗ ಬೆಪ್ಪ ಬಡ್ಡಿ ಮಗ ಅನ್ನಿಸಿಕೊಂಡು ಅವರ ಮಾತಕೊಂಡು**
**ನಮ್ಮಪ್ಪನ ಸಂಪೂರ್ಣ ವ್ಯಕ್ತಿತ್ವ ಎಕ್ಸರೇ ಮಾಡುತ್ತೇನೆ**
**ಮನೆಗೆದೆಯಲಾರದ ಸಂಕಟಕ್ಕೆ ಮಾರುಗೆದೆಯಲು ಹೊರಟ**
**ಇವರ ಪಾಡ ಹಾಡಿ ಕೊಂಡಾಡುತ್ತೇನೆ"[1]**

ಎಂದು ಹೊಗಳುತ್ತಲೇ ತಮ್ಮ ತಂದೆಯ ಮನೋಧರ್ಮಗಳನ್ನು ಬಿಚ್ಚಿಡುವ ನಲ್ಲೂರರು, ಮನೆಗಿಂತ, ಸಮಾಜಕ್ಕೆ ಹೆಚ್ಚು ಪ್ರಾಶಸ್ತ್ಯವನ್ನು ನೀಡಿ ಅದರಿಂದ ಸಿಹಿಕಹಿಗಳೆರಡನ್ನೂ ಉಂಡವರು ನನ್ನಪ್ಪ ಎನ್ನುತ್ತಾರೆ. ಮುಂದುವರಿದು, ಮೂಲತಃ ಸ್ವಾತಂತ್ರ್ಯ ಚಳವಳಿಯ, ಗಾಂಧಿಯವರ ಪ್ರಭಾವಕ್ಕೆ ಒಳಗಾಗಿದ್ದ ಕಾರಣಕ್ಕಾಗಿ ದೇಶ ಸೇವೆ, ದೇಶಪ್ರೇಮದ ಬಗ್ಗೆ ಭಾಷಣ ಮಾಡುವ ನಮ್ಮ ತಂದೆಯವರು, ತಮ್ಮ ಹಾಗೂ ತಮ್ಮ ಮನೆಯವರ ಹೊಟ್ಟೆಗೆ ತಣ್ಣೀರು ಬಟ್ಟೆಯಾದರೂ ಪರವಾಗಿಲ್ಲ ಸಮಾಜದ ಜನರು ಚೆನ್ನಾಗಿರಬೇಕು ಎಂಬುವ ಮನೋಭಾವದವರು ಎಂದು ಈ ಕವನದ ಮೂಲಕ ವಿಶ್ಲೇಷಿಸುತ್ತಾರೆ. ಇಷ್ಟಾದರೂ ನಮ್ಮ ತಂದೆಯ ವ್ಯಕ್ತಿತ್ವವನ್ನು ಸರಿಯಾಗಿ ಅಳೆದು ತೂಗುವವರು ಎಲ್ಲೋ ಸಾವಿರದಲ್ಲಿ ಒಬ್ಬರು ಎನ್ನುವ ನಲ್ಲೂರರು, ಸಮಾಜದ ಜನರಿಗೆ ತಮ್ಮ ಒಳಿತನ್ನು ಬಯಸುವ ನಮ್ಮ ತಂದೆಯಂತವರು ಈಗಿನ ಸಮಾಜಕ್ಕೆ ಬೇಕಾಗಿಲ್ಲ. ಬದಲಿಗೆ, "ನೋಡುವ ಈ ಜನಕ್ಕೆ ನನ್ನಪ್ಪ ನೂರು ಬಣ್ಣ ಸುರ್ಗಿಮರದ ಸುಗುಣ ಬೇಕಿತ್ತು ಹತ್ತಿ ಕುಣಿದರೂ ಚುಚ್ಚದ ಷಂಡತನ ಬೇಕಿತ್ತು ಮುಗಿಲತ್ತ ಮೈಚಾಚಿ ಮರೆತು ಹುಲ್ಲು ಕಟ್ಟಿಗಳ ಕಲ್ಲು ಮುಳ್ಳುಗಳ ಒಮ್ಮೊಮ್ಮೆ ಮೇಲೇರುವ ಡೊಂಬರ ಗಳವು ಆಗಬೇಕಿತ್ತು ಕಡಿದರುರುಳುವ ಬಾಳೆಯಾಗದೆ ಬಡಿದಾಗ ಬಂಡೆಯಾಗಬೇಕಿತ್ತು"[2] ಎನ್ನುತ್ತಾರೆ. ಜೊತೆಗೆ ತಂದೆಯ ಜೊತೆಗೆ ನಿರಂತರ ಸಂಘರ್ಷವನ್ನೇ ಕಂಡ ನಲ್ಲೂರರು ಒಂದು ಹಂತಕ್ಕೆ ತಂದೆ ನನ್ನೊಡನೆ ಇರಬೇಕಿತ್ತು, ಅವರನ್ನು ಅರ್ಥೈಸಿಕೊಳ್ಳಲು ನಾನು ಎಡವಿದ್ದೇನೆ ಎಂಬ ಪಾಪ ಪ್ರಜ್ಞೆಯನ್ನು ಹೊರಹಾಕುತ್ತಾರೆ. ಆ ಮೂಲಕ 'ಈಗ ಅಪ್ಪ ಎಲ್ಲಾ ಹುರುಳಿಲ್ಲದ ಗುಲ್ಲು ಗತಕಾಲದ ಗುರುತಿಗೆ ಸ್ಮಾರಕದ ಕಲ್ಲು'[3] ಎನ್ನುತ್ತಾರೆ.

ಬಾಲ್ಯದಲ್ಲಿ ತಾನು ಆಡುತ್ತಿದ್ದ ಆಟಗಳಿಗೆ ಅಪ್ಪ ಬೈಯುತ್ತಿದ್ದ ಬಗ್ಗೆ, ಯಾವ ರೀತಿ ಇರಬೇಕು ಯಾವ ರೀತಿ ಇರಬಾರದು ಎಂದು ಹಾಕುತ್ತಿದ್ದ ನಿರ್ಬಂಧಗಳಿಂದಾಗಿ ಅಕ್ಷರಶಃ ನಾನು ಮೂಕನಾಗಿದ್ದೆ ಎಂದು ಹೇಳುವ ನಲ್ಲೂರರು ತಮ್ಮ 'ಮೂಗ'

ಕವನದ ಮೂಲಕ ಆ ನೆನಪುಗಳನ್ನು ಕಟ್ಟಿಕೊಡುತ್ತಾರೆ. ಈ ಕವನದಲ್ಲಿ, "ಕಾಲ ಕಿತ್ತರೆ ಸಾಕು 'ಸಲ್ಲೆಲ್ಲಿ ಹೋಗ್ತಿ' ತುಟಿಯಗಲಿಸಿದರೆ 'ಸುಂಸುಂಕೆ ಯಾಕ್ ನಗ್ತಿ' ಇರು ಒಳ್ಗೆ ಹೋಗಬೇಡ ಹೊರ್ಗೆ ಅಪ್ಪನ ಆಜ್ಞಾಪಾಲಕ ಈ ಬಾಲಕ ಪುಕ್ಕವಿಲ್ಲದ ಹಕ್ಕಿಯಾದ"[4] ಎನ್ನುತ್ತಾ ಬಾಲ್ಯದಿಂದಲೂ ಅಪ್ಪ ನಲ್ಲೂರರನ್ನು ಶಿಸ್ತಿನಿಂದ ಬೆಳೆಸಿದ್ದನ್ನು ತಿಳಿಸುತ್ತಾರೆ. ಮುಂದುವರಿದು ಇದೇ ಕವನದಲ್ಲಿ ಮನದಲ್ಲಿ ಮೂಡಿದ ಭಾವನೆಗಳು ರಾಗವಾಗಿ ಬಾಯಿಂದ ಹೊರಬಂದಾಗ," 'ಮುಚ್ಚೋ ಬಾಯಿ ನಿನ್ಹಾಗೆ ಅರಚುತ್ತೆ ಬೀದೀಲಿನಾಯಿ ಯಾವನೇಳ್ಕೊಟ್ಟ ಈ ಪಾಟಿ ರಾಗ ಯಾವಾಗ ಬಡೀತು ನಿನ್ಗೆ ಈ ರೋಗ'[5] ಎಂದು ಅಪ್ಪ ವಿರೋಧಿಸಿದ ಕಾರಣದಿಂದ ಹಾಡೋ ಹುಡುಗ ಮೂಗನಾಗ ಬೇಕಾಯಿತು ಎನ್ನುತ್ತಾರೆ.

ಹಾಗೆಯೇ ನಲ್ಲೂರರು ತಮ್ಮ 'ಅಪ್ಪ ಮತ್ತು ಗಾಂಧಿ' ಎಂಬ ಕವನದಲ್ಲೂ ತಮ್ಮ ತಂದೆಯ ವ್ಯಕ್ತಿತ್ವವನ್ನು ಕಟ್ಟಿಕೊಟ್ಟಿದ್ದಾರೆ. ಮಲ್ಲೇಪುರಂ ವೆಂಕಟೇಶ್‌ರವರು ಅಭಿಪ್ರಾಯ ಪಡುವಂತೆ 'ಈ ಕವಿತೆಯಲ್ಲಿ ಗಾಂಧಿ ಎಂಬ ರೂಪಕವು ಅಂತಿಮವಾಗಿ ಅಪ್ಪನ ಪ್ರತಿಮೆಯಲ್ಲಿ ಅಡಕಗೊಳ್ಳುತ್ತದೆ. ಈ ಕವಿತೆಯು ದಿಟವಾಗಿ ವ್ಯಕ್ತಿಮೆಯನ್ನು ಕಳಕೊಂಡು ಸಾಮಾಜೀಕರಣವಾಗುವ ಬಗೆಯನ್ನು ಕಾಣುತ್ತೇವೆ.'[6] ಈ ಕವಿತೆಯಲ್ಲಿ ನಲ್ಲೂರರು ತಮ್ಮ ತಂದೆಯನ್ನು ಕುರಿತು, 'ಗಾಂಧಿ ಚರಕದೊಳಗೆ ಅಪ್ಪ ನೂಲಾಗಿ ಸೇರಿದ್ದು ನನಗೆ ಅಪ್ಪನಲಿ ಗಾಂಧಿ ಅವತರಿಸಿ, ನಿಂದದ್ದು ಕಂಡಿದ್ದು ಉಂಡಿದ್ದು ದಿಟವಾಗಿ ಸಟೆಯಿಲ್ಲ'[7] ಎನ್ನುತ್ತಾರಲ್ಲದೆ, ಗಾಂಧಿ ಸತ್ತರೂ ಅವರ ತತ್ವಗಳನ್ನು ನಂಬಿ, ಅದರಿಂದಾಗಿ ನೋವುಗಳನ್ನು ನುಂಗಿ, ಅದು ಹೊರಗಿನ ಪ್ರಪಂಚಕ್ಕೆ ಗೋಚರವಾಗದೇ ಇರಲಿ ಎಂಬ ಕಾರಣದಿಂದ ಮೇಲ್ನೋಟಕ್ಕೆ ನಗುತ್ತಲೇ, ಒಳಗೆ ದುಃಖಪಡುತ್ತಿದ್ದ ಬಗೆಯನ್ನು ವಿವರಿಸುತ್ತಾ, "ಕಡೆಗೆ ಅಪ್ಪ ಗಾಂಧಿ ಸತ್ತರೂ ಅವನ ತತ್ವವ ನೆಮ್ಮಿ ಬಾಳ ಸಂಜೆಯಲಿ ನೋವುಂಡು ನಕ್ಕಿದ್ದು ನಮ್ಮೆಲ್ಲರ ಬೆತ್ತಲೆ ಮಾಡಿ ಗಾಂಧಿಯನು ಸೇರಿದ್ದು ನನ್ನ ಎದೆ ಸಮಾಧಿಯಲಿ ಮಾಗದೆ ಕುಳಿತಿದೆ ಕೆಲವೊಮ್ಮೆ ಹುಣ್ಣಾಗಿ ಕೀವಾಗಿ ನೋವು ಮಿಡಿಯುತ್ತಲೇ ಇದೆ'[8] ಎಂದು ತಮ್ಮ ತಂದೆಯ ನೆನಪು ಇನ್ನೂ ಇವರ ಮನಸ್ಸಿನಲ್ಲಿ ಹಸಿರಾಗಿರುವ ಬಗೆಯನ್ನು ಹಾಗೂ ಅಂತವನ ಮಗನಾಗಿ ಹುಟ್ಟಿದುದಕ್ಕೆ ಹೆಮ್ಮೆ ಇದೆ ಎಂಬುದಾಗಿಯೂ ವರ್ಣಿಸುತ್ತಾರೆ.

ತಂದೆಯಂತೆಯೇ ನಲ್ಲೂರು ಪ್ರಸಾದ್ ರವರ ಮೇಲೆ ಪ್ರಭಾವ ಬೀರಿದವರು ಅವರ ತಾಯಿ ಹಾಗೂ ಗುರು. ಬಾಲ್ಯದಿಂದಲೂ ತಮ್ಮ ತಾಯಿಯ ಆರೈಕೆಯಲ್ಲಿ ಬೆಳೆದರೂ, ತಂದೆಯ ಮಾರ್ಗದರ್ಶನದಲ್ಲೇ ಹೆಚ್ಚಾಗಿ ಬೆಳೆದ ನಲ್ಲೂರರಿಗೆ ತಾಯಿಯ ನಿಜವಾದ ಪ್ರೀತಿ ಅಂತಃಕರಣವನ್ನು ಅರಿಯಲಾಗಲಿಲ್ಲ. ಇದನ್ನು ನಲ್ಲೂರರು ತಮ್ಮ 'ಭಸ್ಮಾಸುರ' ಕವನದಲ್ಲಿ ಕಟ್ಟಿಕೊಡುತ್ತಾರೆ. ಈ ಕವನದಲ್ಲಿ, 'ಹೆತ್ತವ್ವನ ಎದೆಹಾಲು ಚೀಪಿ ಎತ್ತರ ಬೆಳೆದ ಭೂಪೋತ್ತಮ ನಾನು ಅದಕ್ಕೇ ಅರ್ಥವಾಗದು ಈ ಅವ್ವನೆಂದರೆ

ಯಾರು?'[9] ಎಂದು ಪ್ರಶ್ನಿಸುತ್ತಾ ತಾವೇ ಉತ್ತರವನ್ನು ಹುಡುಕುವ ಪ್ರಯತ್ನವನ್ನು ಮಾಡುತ್ತಾರೆ. ಇದೇ ಕವನದಲ್ಲಿ ತಮ್ಮ ತಂದೆಯನ್ನೂ ಸರಿಯಾಗಿ ಅರ್ಥೈಸಿಕೊಳ್ಳಲಾಗಲಿಲ್ಲ ಎಂಬುದನ್ನು, 'ಅಪ್ಪನ ಭುಜದಲ್ಲಿ ಕುಳಿತು ಕುಣಿದ ಯಜಮಾನ ಅಸಮಾನ್ಯ ನಾನು ಅದಕ್ಕೇ ತಿಳಿಯದು ಅಪ್ಪನೆಂದರೆ ಯಾರು?'[10] ಎಂಬುದನ್ನು ಅರಿಯಲಾಗಲಿಲ್ಲ ಎನ್ನುತ್ತಾರೆ. ಹಾಗೆಯೇ ಉಪದೇಶ ನೀಡಿದ ಗುರುವನ್ನು ನಾನು ಸರಿಯಾಗಿ ಅರ್ಥ ಮಾಡಿಕೊಳ್ಳಲಾಗಲಿಲ್ಲ ಎಂಬುದನ್ನು, 'ಗುರುವಿನರಮನೆಯಲ್ಲಿ ಅ, ಆ ಕಲಿತ ಅರಗಿಳಿ ಗಿಡುಗ ಗರುಡ ನಾನು, ಅದಕೇ ಅರಿವಿಲ್ಲ ಈ ಗುರುವೆಂದರೆ ಯಾರು?'[11] ಎಂದು ಭಾವುಕರಾಗುತ್ತಾರೆ. ಕೊನೆಗೆ ತಾಯಿಯನ್ನು, ತಂದೆಯನ್ನು, ಗುರುವನ್ನು ಅರಿಯದ ನಾನು ಎಂದರೆ ಯಾರು? ಎಂದು ತಮ್ಮನ್ನೇ ತಾವೇ ಪ್ರಶ್ನಿಸಿಕೊಳ್ಳುವುದನ್ನು ಕಾಣಬಹುದು. ನಲ್ಲೂರರು ತಮ್ಮ ತಾಯಿಯ ವ್ಯಕ್ತಿತ್ವವನ್ನು ಕುರಿತು ತಮ್ಮ 'ನನ್ನೂರ ನನ್ನವ್ವ' ಕವನದ ಮೂಲಕ ಕಟ್ಟಿಕೊಡುತ್ತಾರೆ. ನಲ್ಲೂರರ ತಾಯಿಯನ್ನು ಗಂಗೆಗೆ ಹೋಲಿಸಿ ಕವನ ಕಟ್ಟಿರುವ ನಲ್ಲೂರರ ಪ್ರಕಾರ, ಇವರ ತಾಯಿ ಹದಿನಾರು ಮೊಳ ಸೀರೆಯನ್ನುಟ್ಟು, ನೆಲಕೆ ಹಸಿರನ್ನು ತರುವ, ಮುಡಿ ತುಂಬ ಮಲ್ಲಿಗೆಯನ್ನು ಮುಡಿದು ಮೈ ತುಂಬಾ ಸೆರಗನ್ನು ಹೊದ್ದು ನಗುನಗುತ್ತಾ ಇರುವ ಗರತಿ ಗಂಗವ್ವ. ಅಲ್ಲದೆ ಸುತ್ತಲೂ ನೂರಾರು ಹಳ್ಳಗಳಿಗೆ ನೀರು ಹರಿಸುವ, ಮಳೆ ತರಿಸುವ, ಗಿಡ, ದಂಟಿ, ಬಾಳೆ, ತೆಂಗು, ಮಾವು. ಬೇವುಗಳಲ್ಲಿ ಸಂತಸ ತರಿಸುವ ನೆಲವನ್ನು ನಂದನವನ ಮಾಡುವವಳು. ಇಂತಹ ತಾಯಿಯು ಬದಲಾದ ಈ ಕಾಲಘಟ್ಟದಲ್ಲಿ ಹೇಗೆ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿದ್ದಾಳೆ ಎಂಬುದನ್ನು ಹೇಳುತ್ತಾ, 'ಗಂಧ ಗಾಳಿಯು ಇಲ್ಲ ಚೆಂದಾದ ನಗೆಯಿಲ್ಲ ಬತ್ತಬಾರದ ಗಂಗೆ ಸತ್ತು ಹೋಯಿತೆ ತಾಯಿ ಹೇಗಿದ್ದೆ ನನ್ನವ್ವ ಹೇಗಾಗಿ ಹೋದವ್ವ ಅಂಥ ನನ್ನವ್ವ ಇಂಗ್ಯಾಕೆ ಕುಂತ್ಯವ್ವ ನಲ್ಲೂರ ದೊರೆಯವ್ವ ನಗೆ ಚೆಲ್ಲಿ ಹೇಳವ್ವ''[12] ಎಂದು ಕೇಳುವುದನ್ನು ಕಾಣಬಹುದು.

ಹೆತ್ತವರ, ಒಡಹುಟ್ಟಿದವರ, ನಂಟರ, ಬಂಧುಬಾಂಧವರ ಅವಮಾನ, ಅಪನಿಂದೆಗೆ ಗುರಿಯಾಗಿ, ಪ್ರಾಣವನ್ನು ಕಳೆದುಕೊಳ್ಳುವ ಹಂತವನ್ನು ದಾಟಿ, ಅಪನಿಂದೆಯನ್ನೇ ಮೆಟ್ಟಿಲಾಗಿ ಮಾಡಿಕೊಂಡು, ಯಾರೆಲ್ಲ ಅಪನಿಂದೆಗೆ ಗುರಿಮಾಡಿದರೋ ಅವರ ಮುಂದೆಯೇ ಬದುಕಿನಲ್ಲಿ ನೆಲೆ ಕಂಡುಕೊಂಡ ಬಗೆಯನ್ನು ಸಾರಿ ಹೇಳಬೇಕು ಎಂಬ ಆಶಯವನ್ನು ತಮ್ಮ 'ಎಚ್ಚರ' ಕವನದ ಮೂಲಕ ಅಭಿವ್ಯಕ್ತಿಸುವ ನಲ್ಲೂರರು 'ತುಳಿಯ ಬೇಡಿರಿ ಅಳಿಯುವ ಬದಲು ಬೆಳೆದು ಹೋಗುತ್ತದೆ. ಕಳೆಯ ಬೇಡಿರಿ ಇನ್ನೊಂದೆಡೆ ಕೂಡುತ್ತಾ ಸಾಗುತ್ತದೆ'[13] ಎಂದು ನಿಂದನೆಗೆ ಗುರಿ ಮಾಡಿದವರನ್ನು ಎಚ್ಚರಿಸುವುದನ್ನು ಕಾಣಬಹುದು.

ನಲ್ಲೂರರು ತಮ್ಮ ಸುತ್ತಲಿನ ಪರಿಸರ, ತಾವು ಕಳೆದ ಬಾಲ್ಯದ ದಿನಗಳು,

ತಮ್ಮ ಮತ್ತು ತಾಯಿ, ತಂದೆಯ, ಅಜ್ಜಿಯ ನಡುವಿನ ಒಡನಾಟ, ಊರು ಕೇರಿ, ಜನರ ಬದುಕು ಬವಣೆ ಇತ್ಯಾದಿಗಳನ್ನು ತಮ್ಮ 'ದುರಂತ' ಕವನದ ಮೂಲಕ ಕಟ್ಟಿಕೊಟ್ಟಿರುವುದನ್ನು ಕಾಣಬಹುದು. ಹಾಗೆಯೇ ನಲ್ಲೂರರ ಮತ್ತೊಂದು ಕವನ 'ನನ್ನೆದೆಯ ರಾಗಗಳು' ಸಹ ಇವರ ಬಾಲ್ಯದ ಜೀವನವನ್ನು ನಮ್ಮ ಮುಂದೆ ಇಡುತ್ತದೆ. ಜೊತೆಗೆ ಬದಲಾದ ಕಾಲಘಟ್ಟದಲ್ಲಿ ಆ ಬಾಲ್ಯಜೀವನದ ಕುರುಹುಗಳು ಮಾಯವಾದ ಬಗೆಯನ್ನು ವರ್ಣಿಸುತ್ತಾರೆ. ಈ ಕವನದಲ್ಲಿ ಕವಿ, 'ಈ ಭುವಿಗೆ ಕಂದನಾಗಿ ಬಂದ ದಿನದಿಂದಲೂ ನನ್ನೊಡನೆ ನೇಹಿಗರಾಗಿ ಪಡಿ ನುಡಿದು ಹಾಡ ಹರಿಸಿದ ರಾಗಗಳೇ ಈಗೆಲ್ಲಿ ಹೋದಿರಿ ನೀವು ಅಜ್ಜಿಯ ಕಂಕುಳಲ್ಲಿ ಕುಣಿದ ಹಿಮಾಲಯ ಹೆಗಲ ಅಜ್ಜನ ಸಮಾರಿ ಮಾಡಿದ್ದ 'ಅಪ್ಪನ ಕೋಲಿಗೆ ನನ್ನ ಥಕಥಕನೆ ಕೂಚಿಪುಡಿ ಕುಣಿಸಿದ್ದ ಎತ್ತಿಕೊಂಡವರ, ಮುತ್ತಿಟ್ಟು ನಲಿದವರ ದೂರಿ ದೂರಿ ದುಕ್ಕಲವ್ವ ಪಲಕುಗಳೇ ಉಲಿದ ಜೋಗುಳವೇ ಎಲ್ಲ ಈಗೆಲ್ಲಿ?'[14] ಎಂದು ತಾವು ಬಾಲ್ಯದಲ್ಲಿ ಕಂಡುಂಡ ಅನುಭವಗಳನ್ನು ನಮ್ಮ ಮುಂದಿಡುತ್ತಾರೆ. ಮುಂದುವರಿದು ಅಂದಿನ ಗ್ರಾಮೀಣ ಸಮಾಜದಲ್ಲಿ ಆಗುತ್ತಿರುವ ಪಲ್ಲಟಗಳನ್ನು ವಿಶ್ಲೇಷಿಸುತ್ತಾ, 'ಬತ್ತಿ ಹೋಗಿದೆ ಎದೆಯ ಬಾವಿ ಕಣ್ಮುಚ್ಚಿ ಧ್ಯಾನಿಸಿ ಹಾಡ ಹೊರಟರೆ ರಾಗ, ಎಲ್ಲೋ ಗಂಟಲಲ್ಲಿ ಗೂಟ ಜಡಿದು ಮೆಟರುಗಣ್ಣಾಗಿ ಮುಖ ಕೆಂಪಾಗಿ, ಬರೀ ಗೊರಗೊರ ಸದ್ದು ಎಲ್ಲಿ ಹೋದಿರಿ ರಾಗಗಳೇ ಬರಲಾರಿರಾ ಮತ್ತೆ ನನ್ನೆದೆಯ ಗೂಡೊಳಗೆ'[15] ಎಂದು ತಮ್ಮ ದುಗುಡವನ್ನು ವ್ಯಕ್ತಪಡಿಸುತ್ತಾರೆ. ಇದೇ ಮಾದರಿಯ ಅಭಿಪ್ರಾಯವನ್ನು ತಮ್ಮ 'ನನ್ನೂರು' ಕವನದ ಮೂಲಕ ವ್ಯಕ್ತಪಡಿಸುವ ನಲ್ಲೂರರು, 'ಎಂಗೆ ಮರೆಯಲಿ ಯವ್ವ ಎಂಗೆ ಮರೆಯಲಿ ಭತ್ತ ರಾಗಿ ಕಬ್ಬು ತೆಂಗು, ಎತ್ತರಾಗಿ ಬೆಳೆದು ನಿಂತ ಮುತ್ತಿನಂತ ನನ್ನ ಊರ ಎಂಗೆ ಮರೆಯಲಿ'[16] ಎನ್ನುತ್ತಾ ತಾವು ದನವ ಕಾಯುತ್ತಿದ್ದುದ್ದನ್ನು, ಒಪ್ಪತ್ತು ತಿಂದು ಅಸ್ಥಿಪಂಜರದಂತಿದ್ದ ಜನರಿಂದ ಕೂಡಿದ್ದ, ನೀರು ನೆರಳು ಕೊಟ್ಟ ಊರನ್ನು ಎಂಗೆ ಮರೆಯಲಿ ಎಂದು ಆಲಾಪಿಸುತ್ತಾರೆ. ಮಾತ್ರವಲ್ಲ ತಮ್ಮ ಮತ್ತೊಂದು ಕವನ 'ಬರಗುಳ'[17] ಎಂಬುದರಲ್ಲಿ ತಾನು ಹುಟ್ಟಿದಾಗ ಅಳದೇ ಮಗುಮ್ಮಾಗಿ ಮಲಗಿದ್ದಾಗ 'ಅಳೋದೆ ಇಲ್ವಲ್ಲ ಹಾಳ್ಮಗ' ಎಂದು ಸೂಲಗಿತ್ತಿಯರ ದಬ್ಬಳ ಕಾಸಿ ಬರಗುಳ ಹಾಕಿದ್ದುದ್ದನ್ನು ನೆನಪಿಸಿಕೊಳ್ಳುವ ನಲ್ಲೂರರು, ಅಜ್ಜಿ, ಬಂಧು ಬಳಗ, ಶಾಲಾ ಜೀವನ, ಮೇಷ್ಟ್ರು ಹೀಗೆ ತಮ್ಮ ಒಟ್ಟಾರೆ ಬಾಲ್ಯ ಜೀವನವನ್ನು ಈ ಕವನದ ಮೂಲಕ ನೆನಪಿಸಿಕೊಳ್ಳುತ್ತಾ ಇಂದಿಗೂ ನನ್ನ ಅಂಡಿನಲ್ಲಿ (ಕುಂಡಿ)ಯಲ್ಲಿ ಬರಗುಳ ಶಾಸನದಂತೆ ಇದೆ ಎನ್ನುತ್ತಾರೆ.

ನಲ್ಲೂರರು ತಮ್ಮ ಮತ್ತೊಂದು ಕವನ 'ಅರಳಿ ಮರ ಮತ್ತು ಕಟ್ಟೆ' ಎಂಬುದರಲ್ಲಿ ಇವರ ಹುಟ್ಟೂರಾದ ನಲ್ಲೂರಿನಲ್ಲಿ ಬದಲಾದ ಕಾಲಘಟ್ಟದಲ್ಲಿ ಆಗಿರುವ ಸ್ಥಿತ್ಯಂತರಗಳನ್ನು ಕಟ್ಟಿಕೊಡುತ್ತಾರೆ. ಇವರ ಪ್ರಕಾರ ಪ್ರಸ್ತುತ ನಲ್ಲೂರಿನ ಅರಳಿ ಮರದ

ಕೊಂಬೆಗಳಲ್ಲಿ ಹಕ್ಕಿಗಳು ಗೂಡು ಕಟ್ಟುವುದಿಲ್ಲ. ಬಾವಲಿಗಳು ತಲೆಕೆಳಗಾಗಿ ನೇತಾಡುವುದಿಲ್ಲ, ಗಿಳಿ, ಕಾಗೆ, ಗೂಬೆ, ಗೊರವಂಕದಂತಹ ಹತ್ತಾರು ಪಕ್ಷಿಗಳ ಧ್ವನಿ ಕೇಳಿಸುವುದಿಲ್ಲ ಮಾತ್ರವಲ್ಲ, 'ಬಸಿರಾಗದೆ ಕುಳಿತ ಬಂಜೆ ಮುತ್ತೈದೆ ಕಟ್ಟುತ್ತಿಲ್ಲ ಕೊಂಬೆಗೆ ಅರಿಶಿನ ದಾರ, ಬಲವಂದು ಸುತ್ತುತ್ತಿಲ್ಲ ಅರಳಿಕಟ್ಟೆಯ ಹಜಾರ ಊರ ನ್ಯಾಯ ನಿಕರಕ್ಕೆ, ಕಟ್ಟೆಯ ಮೇಲೆ ಕೂರುವಂತಿಲ್ಲ ಕುಂಡಿಗಳು ತೀರ್ಪಿಗೆ ಸಾಕ್ಷಿಯಾಗುತ್ತಿಲ್ಲ ಈಗ ಮರ, ಮಕ್ಕಳ ಕೇಕೆಗೆ ಆಟದಂಗಳವಾಗುತ್ತಿಲ್ಲ ಮುಪ್ಪಿಡಿದ ಮಂದಿ ಮರಕ್ಕೊರಗಿ ನಿಟ್ಟುಸಿರುಡುವಂತಿಲ್ಲ ಹೊಲಗದ್ದೆ, ಪೈರ ಬುಡಕೆ, ಬೀಳುವ ಮಚ್ಚು ಬಾಚಿ ಕೊಡ್ಲಿ ಕಡೆಗೆ ಹಂದಿ ಎದೆಗೆ ಊರುವ ಚೂರಿಗೆ, ಮಸೆವ ಕಲ್ಲಾಗುತ್ತಿಲ್ಲ ಕಟ್ಟೆ'[18] ಎನ್ನುತ್ತಾ, ಪ್ರತಿ ಗ್ರಾಮದ ಮಧ್ಯದಲ್ಲೋ, ಇಲ್ಲವೇ ಊರ ಹೊರಗೋ ಇರುತ್ತಿದ್ದ ಅರಳಿಮರ ಹಾಗೂ ಕಟ್ಟೆಯ ಮಹತ್ವವನ್ನು ಹೇಳುತ್ತಾರೆ. ಹಾಗೆಯೇ ಇತ್ತೀಚಿನ ದಿನಗಳಲ್ಲಿ ನಲ್ಲೂರು ಸೇರಿದಂತೆ ಇತರೆ ಗ್ರಾಮಗಳಲ್ಲಿ ಅರಳಿ ಮರ ಹಾಗೂ ಕಟ್ಟೆ ಮರೆಯಾಗುತ್ತಿರುವುದರ ಬಗ್ಗೆಯೂ ವಿಷಾದವನ್ನು ವ್ಯಕ್ತಪಡಿಸುತ್ತಾರೆ.

ನಲ್ಲೂರರು ತಮ್ಮ 'ಬಾಳ ಸಂಗ್ರಾಮದಲಿ' ಎನ್ನುವ ಕವನದಲ್ಲಿ ತಾವೇ ಒಬ್ಬ ಸೈನಿಕನಾಗಿ ತಮ್ಮ ಸುತ್ತಲಿನ ಬದುಕಿನ ನಡೆಸುವ ಸಂಗ್ರಾಮವನ್ನು ವಿಷದವಾಗಿ ಕಟ್ಟಿಕೊಡುತ್ತಾರೆ. ಈ ಬದುಕಿನ ಹೋರಾಟದಲ್ಲಿ ಬಂಧು ಬಾಂಧವರಾದಿಯಾಗಿ ಕುರುಕ್ಷೇತ್ರದ ವಿವಿಧ ಪಾತ್ರಗಳಂತಹ ಜನರ ಜೊತೆ ಹೋರಾಡ ಬೇಕಾದ ಬಗೆಯನ್ನು ವಿವರಿಸುವ ನಲ್ಲೂರರು, 'ಇವರೆಲ್ಲ ನನ್ನವರೆ ನನ್ನೊಡನೆ ಬೆಳೆದವರೆ, ಹೂವ ಕೊಟ್ಟವರು ಇವರೆ, ಹಾವ ಬಿಟ್ಟವರೂ ಇವರೇ, ಹಸಿದಾಗ ತುತ್ತುಣಿಸಿ, ದಣಿವಿಗೆ ನೀರುಣಿಸಿ, ಕಡೆಗೆ ವಿಷ ಊಡಿದವರು, ಎಲ್ಲರೂ ನನ್ನವರೇ'[19] ಎನ್ನುತ್ತಾ ಪ್ರೀತಿ ಕೊಟ್ಟ ಸಂಬಂಧಿಕರೇ ವಿಷವನ್ನು ನೀಡುವವರಾದಾಗ ಅವರ ಜೊತೆ ಹೋರಾಡುವುದು ಹೇಗೆ? ಎಂಬ ಪ್ರಶ್ನೆಯನ್ನು ಹಾಕಿಕೊಳ್ಳುವುದನ್ನು ಕಾಣಬಹುದು.

ಒಟ್ಟಾರೆಯಾಗಿ ನಲ್ಲೂರರ ಕವನಗಳಲ್ಲಿ ಅಡಕವಾಗಿರುವ ಕೌಟುಂಬಿಕ ನೆಲೆಯ ವಿವಿಧ ಮುಖಗಳನ್ನು ಅಧ್ಯಯನಕ್ಕೆ ಒಳಪಡಿಸಿ, ಅಲ್ಲಿ ಅಡಕವಾಗಿರುವ ವಿಭಿನ್ನ ನೆಲೆಗಳನ್ನು ವಿಮರ್ಶಿಸಿದಾಗ ತಿಳಿದು ಬರುವುದೇನೆಂದರೆ ಪ್ರಹ್ಲಾದ ಅಗಸನಕಟ್ಟೆಯವರು 'ಕಾವ್ಯ ಅನ್ನುವುದು 'ಮಾತು ಮುತ್ತಾಗುವ' ಪರಿ ಎಂಬ ಶ್ರದ್ಧೆಯನ್ನು ನಲ್ಲೂರು ಪ್ರಸಾದ್ ಸದಾ ಎಚ್ಚರಿಕೆಯಿಂದ ತಮ್ಮ ಕಾವ್ಯೋದ್ಯೋಗದಲ್ಲಿ ಬಳಸುತ್ತಾರೆ'[20] ಎಂದು ಅಭಿಪ್ರಾಯಪಟ್ಟಿರುವುದು ಗಮನಾರ್ಹವಾಗಿದೆ. ಇವರ ಕಾವ್ಯವು ಸಾಮಾಜಿಕ, ರಾಜಕೀಯ ಸಂಗತಿಗಳನ್ನು ಎದುರುಗೊಂಡಾಗ ವಿಷಾದ ಮತ್ತು ತಪ್ತತೆಯ ನೆಲೆಯಲ್ಲಿ ನೋಡದೆ ಅದನ್ನು ವಿಡಂಬನಾ ಧಾಟಿಯಿಂದ ಎದುರುಗೊಳ್ಳುವುದನ್ನು ಕಾಣಬಹುದು. ಇವರ ಕಾವ್ಯಗಳಲ್ಲಿ ಆಕ್ರೋಶ, ಸಿಟ್ಟು ಮೊದಲಾದ ಮನೋಧರ್ಮಗಳು ಕಡಿಮೆ ಎಂದೇ ಹೇಳಬಹುದು. ಮಲ್ಲೇಪುರಂ ಜಿ. ವೆಂಕಟೇಶ್‌ರವರ ಅಭಿಪ್ರಾಯಪಡುವಂತೆ

ನಲ್ಲೂರರ 'ಕೆಲವು ಕವಿತೆಗಳಲ್ಲಿ ಲಯದ ಒಡಕಿದ್ದರೂ ಮಾತಿನ ದುಂದುಗಾರಿಕೆ ಇದ್ದರೂ ಅವು ಅವರ ಸಾಮಾಜಿಕೀಕರಣ ಆಶಯಕ್ಕಾಗಿ ದುಡಿದಿವೆ. ದೋಷವು ಗುಣವಾಗುವ ಒಂದು ಪ್ರಕ್ರಿಯೆ ನಮ್ಮಲ್ಲಿ ಉಂಟಷ್ಟೆ. ಇಂಥವು ಆ ಮಾದರಿಯಾಗಿವೆ''[21] ಎಂಬ ಅಭಿಪ್ರಾಯದ ಹಿನ್ನಲೆಯಲ್ಲಿ ನಲ್ಲೂರರ ಕವನ ಸಂಕಲನಗಳ ಕವನಗಳನ್ನು ಅಧ್ಯಯನ ಮಾಡಿದಾಗ ಸಮಾಜದ ಬಹುಮುಖಿ ನೆಲೆಗಳನ್ನು ಇನ್ನಷ್ಟು ವಿಸ್ತರಿಸುವ ಅವಕಾಶ ಕವಿಗೆ ಇತ್ತು ಎಂಬ ಅಭಿಪ್ರಾಯವಿದೆ. ಮುಂದುವರಿದು ನಲ್ಲೂರರ ಒಟ್ಟಾರೆ ಕಾವ್ಯವನ್ನು ವಿಮರ್ಶಿಸಿದ್ದ ಹೆಸರಾಂತ ವಿಮರ್ಶಕರಾದ ಕಿ.ರಂ.ನಾಗರಾಜರವರು ''ಕಾವ್ಯವನ್ನು ಸಹಜವಾಗಿ ನಿರ್ಮಿಸುವವರು, ಪ್ರಜ್ಞಾಪೂರ್ವಕವಾಗಿ ಕಟ್ಟುವವರು, ಕಾವ್ಯವನ್ನು ಹಾಗೂ ಹೀಗೂ ಹೇಗೋ ಕಟ್ಟುತ್ತಲೇ ಬಳಲುತ್ತಿರುವವರು, ಎಂದೆಂದಿಗೂ ಇದ್ದೇ ಇರುತ್ತಾರೆ. ಹಾಗೆ ಇರಲೂ ಬೇಕು. ನಲ್ಲೂರು ಪ್ರಸಾದ್ ಕವಿತೆಗಳನ್ನು ಬರೆಯುತ್ತಾರೆ. ಆದರೆ ಅವರೆಂದೂ 'ಕವಿಭ್ರಮೆ'ಯ ಜಾಲಕ್ಕೆ ಸಿಕ್ಕಿಕೊಂಡವರಲ್ಲ. ಅದು ಅವರಿಗೆ ಬೇಕಾಗಿಯೂ ಇಲ್ಲ. ಕವಿತೆಯ ಗಂಧ-ಗಾಳಿ ಮೂಗು ಕಿವಿಗಳಿಗೆ ತಾಗಲು ತಕ್ಕವಾಗಿದ್ದರೆ ಅದು ಯಾರ ಮರ್ಜಿಯನ್ನು ಹಿಡಿಯ ಬೇಕಿಲ್ಲ. ಇಂಥ ಆಪ್ತ ಕವಿತೆಗಳನ್ನು ಅವರು ನಾಡಿನ ಕಾವ್ಯ ಪರಿಸರದಲ್ಲಿ ತೇಲಿ ಬಿಟ್ಟಿದ್ದಾರೆ. ಹೀಗಾಗಿ ಅವರ ಕವಿತೆಗಳು ಪಿಸುಮಾತಿನ ದನಿಯಂತೆ ಸೂಕ್ಷ್ಮವಾಗಿ ನಮ್ಮನ್ನು ಆವರಿಸುತ್ತದೆ''[22] ಎಂಬ ಅಭಿಪ್ರಾಯವು ನಲ್ಲೂರರ ಕಾವ್ಯದ ವಿಭಿನ್ನ ನೆಲೆಗಳನ್ನು ಅರ್ಥೈಸಿಕೊಳ್ಳಲು ನೆರವಾಗುತ್ತದೆ.

**ಕೊನೆ ಟಿಪ್ಪಣಿಗಳು:**

1. ನಲ್ಲೂರು ಪ್ರಸಾದ್. (1977). ನೀನೆಂಬ ನಾನು (ಕವನ ಸಂಕಲನ). ಕೃಷಿ ಪ್ರಕಾಶನ. ಚನ್ನರಾಯಪಟ್ಟಣ. ಪು. ಸಂ. 14–15
2. ನಲ್ಲೂರು ಪ್ರಸಾದ್. (1977). ನೀನೆಂಬ ನಾನು (ಕವನ ಸಂಕಲನ). ಕೃಷಿ ಪ್ರಕಾಶನ. ಚನ್ನರಾಯಪಟ್ಟಣ. ಪು. ಸಂ. 14
3. ನಲ್ಲೂರು ಪ್ರಸಾದ್. (1977). ನೀನೆಂಬ ನಾನು (ಕವನ ಸಂಕಲನ). ಕೃಷಿ ಪ್ರಕಾಶನ. ಚನ್ನರಾಯಪಟ್ಟಣ. ಪು. ಸಂ. 15
4. ನಲ್ಲೂರು ಪ್ರಸಾದ್. (1996). ಸೋನೆ ಮುಗಿಲು (ಕವನ ಸಂಕಲನ). ಅರ್ಪಿತಾ ಪ್ರಕಾಶನ. ಬೆಂಗಳೂರು. ಪು.ಸಂ. 8
5. ನಲ್ಲೂರು ಪ್ರಸಾದ್. (1996). ಸೋನೆ ಮುಗಿಲು (ಕವನ ಸಂಕಲನ). ಅರ್ಪಿತಾ ಪ್ರಕಾಶನ. ಬೆಂಗಳೂರು. ಪು.ಸಂ. 8–9
6. ನಲ್ಲೂರು ಪ್ರಸಾದ್. (2004). ರೆಕ್ಕೆ ಬಡಿಯುವ ಮುನ್ನ (ಕವನ ಸಂಕಲನ). ಸಿವಿಜಿ ಪಬ್ಲಿಕೇಷನ್ಸ್. ಬೆಂಗಳೂರು. ಪು.ಸಂ. 4–5 (ಮುನ್ನುಡಿ)
7. ನಲ್ಲೂರು ಪ್ರಸಾದ್. (2004). ರೆಕ್ಕೆ ಬಡಿಯುವ ಮುನ್ನ (ಕವನ ಸಂಕಲನ). ಸಿವಿಜಿ ಪಬ್ಲಿಕೇಷನ್ಸ್. ಬೆಂಗಳೂರು ಪು.ಸಂ. 3
8. ನಲ್ಲೂರು ಪ್ರಸಾದ್. (2004). ರೆಕ್ಕೆ ಬಡಿಯುವ ಮುನ್ನ (ಕವನ ಸಂಕಲನ). ಸಿವಿಜಿ ಪಬ್ಲಿಕೇಷನ್ಸ್. ಬೆಂಗಳೂರು ಪು.ಸಂ. 3–4
9. ನಲ್ಲೂರು ಪ್ರಸಾದ್. (1996). ಸೋನೆ ಮುಗಿಲು (ಕವನ ಸಂಕಲನ). ಅರ್ಪಿತಾ ಪ್ರಕಾಶನ. ಬೆಂಗಳೂರು. ಪು.ಸಂ. 18
10. ನಲ್ಲೂರು ಪ್ರಸಾದ್. (1996). ಸೋನೆ ಮುಗಿಲು (ಕವನ ಸಂಕಲನ). ಅರ್ಪಿತಾ ಪ್ರಕಾಶನ. ಬೆಂಗಳೂರು. ಪು.ಸಂ. 18
11. ನಲ್ಲೂರು ಪ್ರಸಾದ್. (1996). ಸೋನೆ ಮುಗಿಲು (ಕವನ ಸಂಕಲನ). ಅರ್ಪಿತಾ ಪ್ರಕಾಶನ. ಬೆಂಗಳೂರು. ಪು.ಸಂ. 18
12. ನಲ್ಲೂರು ಪ್ರಸಾದ್. (2007). ನಿವೃತ್ತೋಪನಿಷತ್ತು (ಕವನ ಸಂಕಲನ). ಸಾಗರ ಪ್ರಕಾಶನ. ಬೆಂಗಳೂರು. ಪು.ಸಂ. 20
13. ನಲ್ಲೂರು ಪ್ರಸಾದ್. (1986). ದಗ್ಧ (ಕವನ ಸಂಕಲನ). ಅರ್ಪಿತ ಪ್ರಕಾಶನ.ಬೆಂಗಳೂರು. ಪು. ಸಂ. 26
14. ನಲ್ಲೂರು ಪ್ರಸಾದ್. (2004). ರೆಕ್ಕೆ ಬಡಿಯುವ ಮುನ್ನ (ಕವನ ಸಂಕಲನ). ಸಿವಿಜಿ ಪಬ್ಲಿಕೇಷನ್ಸ್. ಬೆಂಗಳೂರು ಪು.ಸಂ. 1
15. ನಲ್ಲೂರು ಪ್ರಸಾದ್. (2004). ರೆಕ್ಕೆ ಬಡಿಯುವ ಮುನ್ನ (ಕವನ ಸಂಕಲನ). ಸಿವಿಜಿ ಪಬ್ಲಿಕೇಷನ್ಸ್. ಬೆಂಗಳೂರು ಪು.ಸಂ. 2
16. ನಲ್ಲೂರು ಪ್ರಸಾದ್. (1996). ಸೋನೆ ಮುಗಿಲು (ಕವನ ಸಂಕಲನ). ಅರ್ಪಿತಾ ಪ್ರಕಾಶನ. ಬೆಂಗಳೂರು. ಪು.ಸಂ. 19
17. ನಲ್ಲೂರು ಪ್ರಸಾದ್. (1996). ಸೋನೆ ಮುಗಿಲು (ಕವನ ಸಂಕಲನ). ಅರ್ಪಿತಾ ಪ್ರಕಾಶನ. ಬೆಂಗಳೂರು. ಪು.ಸಂ. 19
18. ನಲ್ಲೂರು ಪ್ರಸಾದ್. (2007). ನಿವೃತ್ತೋಪನಿಷತ್ತು (ಕವನ ಸಂಕಲನ). ಸಾಗರ ಪ್ರಕಾಶನ.

ಬೆಂಗಳೂರು. ಪು.ಸಂ. 14

19. ನಲ್ಲೂರು ಪ್ರಸಾದ್. (2007). ನಿವೃತ್ತೋಪನಿಷತ್ತು (ಕವನ ಸಂಕಲನ). ಸಾಗರ ಪ್ರಕಾಶನ. ಬೆಂಗಳೂರು. ಪು.ಸಂ. 33
20. ಚಂದ್ರಪ್ಪ ಎನ್. (ಸಂ). (2010). ನಿಕಷ, ಬಂಧನ–ಬಿಡುಗಡೆ ನಡುವೆ: ನಿವೃತ್ತೋಪನಿಷತ್ತು. ಮುಂಡ ಪ್ರಕಾಶನ. ಬೆಂಗಳೂರು. ಪು.ಸಂ. 48
21. ಚಂದ್ರಪ್ಪ ಎನ್. (ಸಂ). (2010). ನಿಕಷ, ಬಂಧನ–ಬಿಡುಗಡೆ ನಡುವೆ: ನಿವೃತ್ತೋಪನಿಷತ್ತು. ಮುಂಡ ಪ್ರಕಾಶನ. ಬೆಂಗಳೂರು. ಪು.ಸಂ. 84
22. ನಲ್ಲೂರು ಪ್ರಸಾದ್. (2008). ನವಿಲ ಜಾಗರ. ಐಬಿಎಚ್ ಪ್ರಕಾಶನ. ಬೆಂಗಳೂರು. ಪು.ಸಂ. 168

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.